ಶ್ರೀ ವಾಟಾಳ್ ನಾಗರಾಜ್: ಈ ಕ್ಷಣದಿಂದಲೇ ಜಾರಿಗೊಳಿಸಿದ್ದೇವೆಂದು ಹೇಳಬೇಕು. 'ಶೀಘ್ರದಲ್ಲಿಯೇ ವರ್ಷದಿಂದಲೇ ಜಾರಿಗೊಳಿಸಲಾಗುವುದು' ಎಂಬುದು ಸರಿಯಲ್ಲ, ಸರ್ಕಾರದ ನೀತಿ ಸರಿಯಿಲ್ಲ, ಇದು ವಿಳಂಬ ನೀತಿಯಾಗಿದೆ. ಸರ್ಕಾರದ ವಿಳಂಬ ನೀತಿಯನ್ನು ವಿರೋಧಿಸಿ ನಾನು ಧರಣಿ ಮಾಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ನೀವೊಬ್ಬರೇ ಕನ್ನಡಪ್ರೇಮಿಗಳಲ್ಲ, ಇಲ್ಲಿರತಕ್ಕಂಥ ಎಲ್ಲರೂ ಕನ್ನಡ ಪ್ರೇಮಿಗಳೇ.

ಶ್ರೀ ವಾಟಾಳ್ ನಾಗರಾಜ್: ಈ ಕ್ಷಣದಿಂದ ಜಾರಿಗೊಳಿಸಲು ಒಪ್ಪಿದ್ದೇವೆಂದು ಹೇಳಬೇಕು. ಇಂತಹ ನಾಟಕ ಬೇಕಾಗಿಲ್ಲ, ಇದು ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯೊಳಕ್ಕೆ ಬಂದು ಧರಣಿ ಆರಂಭಿಸಿದರು)

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಈಗ ಕೈಗೊಂಡ ತೀರ್ಮಾನವೇನಿದೆ, ಇದನ್ನು ನಿಯೋಗದೊಂದಿಗೆ ಬಂದಂಥ ಎಲ್ಲಾ ಮಹಾನ್ ನಾಯಕರೂ ಡಾ॥ಚಿದಾನಂದ ಮೂರ್ತಿಯವರ ಪರವಾಗಿ ಒಪ್ಪಿಕೊಂಡಿದ್ದಾರೆ. ಆದುದರಿಂದ, ಈಗಲಾದರೂ ಡಾ॥ಚಿದಾನಂದ ಮೂರ್ತಿಯವರು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ನಾವು ಈ ಸದನದ ಮುಖಾಂತರ ಅವರನ್ನು ಕೇಳಿಕೊಳ್ಳುತ್ತಿದ್ದೇವೆ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಯೊಳಗೆ ನಿಂತು ಮಾತನಾಡುತ್ತಿದ್ದರು)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ತಾವು ಸದನದ ಕಾರ್ಯಕಲಾಪಗಳಿಗೆ ಈ ತರಹ ಅಡ್ಡಿ ಮಾಡುವುದರಿಂದ ಕನ್ನಡದ ಅಭಿಮಾನ ಬೆಳೆಯುವುದಿಲ್ಲ. ಸರ್ಕಾರ ಮಾಡ್ತಿರುವ ಒಳ್ಳೆಯ ಕಾರ್ಯವನ್ನು ನೀವು ಒಪ್ಪಿಕೊಳ್ಳದಿದ್ದರೆ ನಾವೇನು ಮಾಡುವುದು? ಈಗಿನ ಸಮಸ್ಯೆಯನ್ನು ಡಾ॥ಚಿದಾನಂದ ಮೂರ್ತಿಯವರ ಮನಸ್ಸಿಗೆ ಸಮಾಧಾನಕರವಾಗಿ ಅವರು ಒಪ್ಪುವ ರೀತಿಯಲ್ಲಿ ಪರಿಹರಿಸಿದ್ದರೂ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಈ ರೀತಿ ಹೇಳುವುದು ಸರಿಯಲ್ಲ. ಈ ವಿಚಾರದಲ್ಲಿ ಸರ್ಕಾರದ ನಿಲುವು ಸ್ಪಷ್ಟವಾಗಿದೆ. ಈ ಕ್ಷಣದಿಂದ ಇದನ್ನು ಸರ್ಕಾರ ಒಪ್ಪಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇವೊತ್ತೇ ತಾವು ಅವರ ಜೊತೆ ಮಾತುಕತೆ ನಡೆಸಿ ಒಂದು ಸರ್ಕಾರಿ ಆಜ್ಞೆ ಹೊರಡಿಸಬೇಕು. ಅಲ್ಲಿ ಡಾ॥ ಚಿದಾನಂದ ಮೂರ್ತಿಯವರು ಏನು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅದನ್ನು ನಿಲ್ಲಿಸಿದ್ದಾರೆಯೇ? ಅವರು ನಿಮ್ಮ ಮಾತುಕತೆಗೆ ಒಪ್ಪಿಕೊಂಡಿದ್ದಾರೆಯೇ? ಎರಡನೆಯದಾಗಿ, ಪ್ರಮುಖವಾಗಿರತಕ್ಕಂಥಾದ್ದು ಏನೆಂದರೆ, ಅಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿರುವಂಥ ಡಾ॥ ಚಿದಾನಂದ ಮೂರ್ತಿಯವರಿಗೆ ಮಾತ್ರ ಸೀಮಿತವಾದಂಥ ವಿಷಯ ಇದಲ್ಲ ಇದು ಇಡೀ ಕನ್ನಡ ನಾಡಿನ ಜನರಿಗೆ ಸಂಬಂಧಿಸಿದ ವಿಚಾರವಾದುದರಿಂದ ಇವೊತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ನಂತರ 'ಈ ಕ್ಷಣದಿಂದಲೇ ಇದು ಕಾರ್ಯರೂಪಕ್ಕೆ ಬಂದಿದೆ' ಎಂದು ಒಂದು ಸರ್ಕಾರಿ ಆಜ್ಞೆಯನ್ನು ಈಗಾಗಲೇ ಹೊರಡಿಸಬೇಕಾಗಿತ್ತು. ಆದರೆ, ಆ ರೀತಿ ಮಾಡದೆ ಅವರು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುವಂಥ ಪರಿಸ್ಥಿತಿಗೆ ಬರುವವರೆಗೆ ನೀವು ಏನು ಮಾಡುತ್ತಿದ್ದೀರಿ; ಸುಪ್ರೀಂ ಕೋರ್ಟ್ ತೀರ್ಪಿನಂತೆ ಈ ಕ್ಷಣದಿಂದಲೇ ಜಾರಿಗೆ ತರುತ್ತಿದ್ದೇವೆ ಎನ್ನುವಂಥ ಒಂದು ಸರ್ಕಾರಿ ಆಜ್ಞೆ ಹೊರಡಿಸಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ. ಮೂರನೆಯದಾಗಿ, ನನ್ನ ಬಹಳ ಪ್ರಮುಖವಾದಂಥ ಬೇಡಿಕೆಯನ್ನು ತಮ್ಮ ಮುಂದಿಟ್ಟೆ. ಏನೆಂದರೆ, ತಾವು ಅನೇಕ ಸರ್ಕಾರಿ ಆಜ್ಞೆಗಳನ್ನು